“ನೀರನ್ನು ಮಿತವಾಗಿ ಬಳಸಿ”
“ಕನ್ನಡದಲ್ಲೇ ವ್ಯವಹರಿಸಿ”

www.bwssb.karnataka.gov.in

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

## BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

No : BWSSB ] CHAPM/EST32/433-2016/ 2263 /2023 Date 01 .07.2023 08

Office of the EE(MIS&IT) Cauvery Bhavan, Bangalore-9 No. 443 Dt. 3/8/2023

PB Publish in BWSSB Website as per directions 3/8/2023

**ಅಧಿಸೂಚನೆ**

ವಿಷಯ: ಕಾರ್ಯ ನಿರ್ವಾಹಕ ಅಭಿಯಂತರ(ಕಾವೇರಿ– ಕಾರ್ಯಾಚರಣೆ ಮತ್ತು ನಿರ್ವಹಣೆ)–4 ವಿಭಾಗವನ್ನು ಮರುನಾಮಕರಣಗೊಳಿಸುವ ಬಗ್ಗೆ.

ಉಲ್ಲೇಖ:
1. ಮಂಡಳಿಯ ಪುನರ್ ವಿನ್ಯಾಸಗೊಳಿಸಿರುವ ಅಧಿಸೂಚನೆ ಸಂಖ್ಯೆ: BWSSB/ CHAPM/433-2016/EST32/1306/2022-23 dated: 13.07.2022.
2. ಮಂಡಳಿಯ ತಿದ್ದುಪಡಿ ಅಧಿಸೂಚನೆ ಸಂಖ್ಯೆ: BWSSB/CHAPM/EST32/ 433-2016/1379/2022-23 dated: 19.07.2022.
3. ಮಂಡಳಿಯ ತಿದ್ದುಪಡಿ ಅಧಿಸೂಚನೆ ಸಂಖ್ಯೆ: BWSSB/CHAPM/433-2016/EST32/1509/ 2022-23 dated: 30.07.2022.
4. ಮಂಡಳಿಯ ಸಿಬ್ಬಂದಿ ನಮೂನೆಯ ಅಧಿಸೂಚನೆ ಸಂಖ್ಯೆ: BWSSB/CHAPM/ 37-2013(P-1)/EST32/2064/2022-23 dated: 21.09.2022.
5. ಅಣೆಕಟ್ಟು ಸುರಕ್ಷತಾ ಕಾಯ್ದೆ- 2021.
6. ಸರಕಾರಿ ಆದೇಶ ಇ ಸಂಖ್ಯೆ: ಜಸಂಇ 74 ಡಿಎಸ್‌ಪಿ 2022 ದಿನಾಂಕ: 20.03.2023.
7. ಮುಖ್ಯ ಎಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ ಇವರ ಪತ್ರ ಸಂಖ್ಯೆ: ಮುಇಂ/ ಅಸುಸಂ/ವಿಭಾಗ–3/ಕಾಇಂ3/ಸಕಾಇಂ6/ಸಇಂ9/183/2022-23 ದಿನಾಂಕ: 24.05.2023.
8. ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 108 ಸಮನ್ವಯ 2023 ದಿನಾಂಕ: 08.06.2023.
9. ಕಾನಿಅ(ಕಾ–ಕಾ&ನಿ)–4 ರವರ ಪತ್ರ ಸಂಖ್ಯೆ: BWSSB/EE(K-O&M)-4/PB/116/ 2023-24 dated: 03.07.2023.
10. ಮಾನ್ಯ ಅಧ್ಯಕ್ಷರವರ ಅನುಮೋದನೆ ದಿನಾಂಕ: 17.07.2023.

***

**<u>ಪೀಠಿಕೆ:</u>**

ಕೇಂದ್ರ ಸರಕಾರದ ಅಣೆಕಟ್ಟು ಸುರಕ್ಷತಾ ಕಾಯ್ದೆ- 2021ಯು ದಿನಾಂಕ: 30.12.2021 ರಿಂದ ಜಾರಿಗೆ ಬಂದಿರುತ್ತದೆ. ಈ ಕಾಯ್ದೆಯನ್ವಯ ರಾಷ್ಟ್ರವ್ಯಾಪ್ತಿಯಲ್ಲಿರುವ ನಿರ್ದಿಷ್ಟಪಡಿಸಿದ ಅಣೆಕಟ್ಟುಗಳ ಕಣ್ಗಾವಲು ತಪಾಸಣೆ, ಕಾರ್ಯಾಚರಣೆ ಮತ್ತು ನಿರ್ವಹಣೆ ಹಾಗೂ ಅಣೆಕಟ್ಟು ವೈಫಲ್ಯಕ್ಕೆ ಸಂಬಂಧಿಸಿದ ವಿಪತ್ತುಗಳನ್ನು ತಡೆಗಟ್ಟಲು ಅವುಗಳ

ಸುರಕ್ಷಿತ ಕಾರ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಾಂಸ್ಥಿಕ ಕಾರ್ಯವಿಧಾನವನ್ನು ಒದಗಿಸಲು ಪೂರಕವಾಗಿರುತ್ತದೆ. ಈ ಕಾಯ್ದೆಯ ಅಧ್ಯಾಯ- VII ರ ಸೆಕ್ಷನ್ 30ರಲ್ಲಿ ನಿರ್ದಿಷ್ಟ ಅಣೆಕಟ್ಟುಗಳ ಸುರಕ್ಷತಾ ದೃಷ್ಟಿಯಿಂದ ಅಣೆಕಟ್ಟು ಸುರಕ್ಷತಾ ಘಟಕಗಳನ್ನು ಒದಗಿಸುವ ಸಂಬಂಧ For each specified dam, the owner shall, within the operation and maintenance established provide a dam safety unit consisting of each competent levels of engineers as may be specified by the regulations' ಎಂದು ತಿಳಿಸಲಾಗಿರುವುದರನ್ವಯ ರಾಜ್ಯದಲ್ಲಿ 231 ಅಣೆಕಟ್ಟುಗಳ ಸುರಕ್ಷತಾ ದೃಷ್ಟಿಯಿಂದ ಅಣೆಕಟ್ಟು ಸುರಕ್ಷತಾ ಘಟಕಗಳನ್ನು ಒದಗಿಸುವುದು ಅತ್ಯಾವಶ್ಯಕವಾಗಿರುತ್ತದೆ. ಉಲ್ಲೇಖ (5)ರ ಸರಕಾರಿ ಆದೇಶದಲ್ಲಿ '_______ ಅಣೆಕಟ್ಟೆಯ ಕಣ್ಗಾವಲು, ತಪಾಸಣೆ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಹಾಗೂ ಅಣೆಕಟ್ಟೆ ವೈಫಲ್ಯಕ್ಕೆ ಸಂಬಂಧಿಸಿದ ವಿಪತ್ತುಗಳನ್ನು ತಡೆಗಟ್ಟಲು ಅವುಗಳ ಸುರಕ್ಷಿತ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಜಲ ಸಂಪನ್ಮೂಲ ಇಲಾಖೆಯ (ಭಾರಿ ಮತ್ತು ಮಧ್ಯಮ ನೀರಾವರಿ) ವ್ಯಾಪ್ತಿಯಡಿ ಬರುವ 73 ನಿರ್ದಿಷ್ಟ ಅಣೆಕಟ್ಟುಗಳಿಗೆ ಸಂಬಂಧಿಸಿದಂತೆ ಅಣೆಕಟ್ಟು ಸುರಕ್ಷತಾ ಘಟಕಗಳೆಂದು ಪುನರ್ ನಾಮಕರಣ ಮಾಡಿ ಆದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಡಿಗೆ ಬರುವ 02 ನಿರ್ದಿಷ್ಟ (Specified) ಅಣೆಕಟ್ಟುಗಳಿಗೆ ಸಂಬಂಧಿಸಿದಂತೆ ಅಣೆಕಟ್ಟು ಸುರಕ್ಷತಾ ಘಟಕಗಳೆಂದು ಪುನರ್ ನಾಮಕರಣ ಮಾಡಬೇಕಾಗಿರುತ್ತದೆ. ಆದ್ದರಿಂದ ಈ ಮುಂದಿನಂತೆ ಆದೇಶಿಸಲಾಗಿರುತ್ತದೆ.

## ಆದೇಶ:

ಕೇಂದ್ರ ಜಲ ಆಯೋಗ, ನವದೆಹಲಿಯಿಂದ ಪ್ರಕಟಿಸಿ ನಿರ್ವಹಿಸಲ್ಪಡುವ ರಾಷ್ಟ್ರೀಯ ಭಾರಿ ಅಣೆಕಟ್ಟುಗಳ ನೋಂದಣಿ ಪುಸ್ತಿಕೆ- 2019ರ ಪ್ರಕಾರ ರಾಜ್ಯ 231 ಅಣೆಕಟ್ಟುಗಳ ಪೈಕಿ ನಗರಾಭಿವೃದ್ಧಿ ಇಲಾಖೆ ಕಾರ್ಯ ವ್ಯಾಪ್ತಿಯ ಮಂಡಳಿಯ 02 ಭಾರಿ ಅಣೆಕಟ್ಟುಗಳಾದ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಹೆಸರುಘಟ್ಟ ಜಲಾಶಯಗಳು ಕಾರ್ಯಾಚರಣೆಲ್ಲಿದ್ದು, ಕೇಂದ್ರ ಸರಕಾರದ ಅಣೆಕಟ್ಟು ಸುರಕ್ಷತಾ ಕಾಯ್ದೆ- 2021ಯ ಅಧ್ಯಾಯ- VII ರ ಸೆಕ್ಷನ್ ೩೦ ಮತ್ತು 31ರನ್ವಯ ಕಾರ್ಯನಿರ್ವಾಹಕ ಅಭಿಯಂತರ(ಕಾವೇರಿ- ಕಾರ್ಯಾಚರಣೆ & ನಿರ್ವಹಣೆ)-4 ವಿಭಾಗವನ್ನು ಈ ಮುಂದಿನಂತೆ ಪುನರ್ ನಾಮಕರಣಗೊಳಿಸಿ ಆದೇಶಿಸಿದೆ:

| ಕ್ರ. ಸಂ. | ಎನ್.ಆರ್.ಎಲ್.ಡಿ ಕ್ರ.ಸಂ. | ನಿರ್ದಿಷ್ಟ (Specified) ಅಣೆಕಟ್ಟಿನ ಹೆಸರು | ಮಂಡಳಿಯ ದಿನಾಂಕ: 19.07.2022ರ ಪುನರ್ ವಿನ್ಯಾಸದಲ್ಲಿರುವಂತೆ | ಪುನರ್ ನಾಮಕರಣಗೊಳಿಸಿರುವುದು |
|---|---|---|---|---|
| 1 | 06 (PIC: KA06LH0006) | Hesaraghatta Reservoir | Executive Engineer (Kaveri- Operation and Maintenance)-4, Thippagondanahalli, Magadi Main Road, Bengaluru South Taluk, Bengaluru- 562 130. | Executive Engineer (Kaveri- Operation and Maintenance)- 4 and Dam Sefety Unit, Thippagondanahalli, Magadi Main Road, Bengaluru South Taluk, Bengaluru- 562 130. |
| 2 | 20 (PIC: KA03HH0022) | Thippagondanahalli Reservoir | | |

ಮೇಲ್ಕಂಡಂತೆ ಪುನರ್ ನಾಮಕರಣಗೊಳಿಸಲಾಗಿರುವ ವಿಭಾಗವು ಪ್ರಸ್ತುತ ನಿರ್ವಹಿಸುತ್ತಿರುವ ಕರ್ತವ್ಯಗಳ ಜೊತೆಗೆ ಅಣೆಕಟ್ಟೆ ಸುರಕ್ಷತಾ ಕಾಯ್ದೆ 2021ರ ಅಧ್ಯಾಯ- VII ರ ಸೆಕ್ಷನ್ 30 ಮತ್ತು 31ರಲ್ಲಿ ಸೂಚಿಸಿರುವಂತೆ ಅಣೆಕಟ್ಟೆ ಸುರಕ್ಷತೆಗೆ ಸಂಬಂಧಿಸಿದಂತೆ ಕಾರ್ಯ ಚಟುವಟಿಕೆಗಳನ್ನು ಸಹ ನಿರ್ವಹಿಸುವುದು. ಉಳಿದಂತೆ ಮಂಡಳಿಯ ಪುನರ್ ವಿನ್ಯಾಸದ ಸಂಬಂಧ ಹೊರಡಿಸಿರುವ ಉಲ್ಲೇಖ (2) ಮತ್ತು (4) ರ ಅಧಿಸೂಚನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ
ಬೆಂಗಳೂರು ಜಲಮಂಡಳಿ.

25/7/2023

ಪ್ರತಿಯನ್ನು:

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರಕಾರ ರವರ ಘನ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಅಧ್ಯಕ್ಷರ, ಬೆಂ.ಜ.ಮಂ ರವರ ಆದ್ಯ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರಧಾನ ಅಭಿಯಂತರರು/ಎಲ್ಲಾ ಮುಖ್ಯ ಅಭಿಯಂತರರು/ಅಪರ ಮುಖ್ಯ ಅಭಿಯಂತರರು ಮತ್ತು ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕಾಧಿಕಾರಿಗಳು ರವರ ಮಾಹಿತಿಗಾಗಿ.
4. ಆ.ಅ/ಸಾ.ಸಂ.ಅ/ಸಿ.ನಿ.ಅ/ಕಾ.ಅ. ರವರ ಗಮನಕ್ಕಾಗಿ.
5. ಕಾನಿಅ(ಎಂ.ಐ.ಎಸ್) ರವರ ಗಮನಕ್ಕಾಗಿ ಹಾಗೂ ಮಂಡಳಿಯ ಜಾಲತಾಣದಲ್ಲಿ ಅಳವಡಿಸುವ ಸಂಬಂಧ ಸೂಕ್ತ ಕ್ರಮಕ್ಕಾಗಿ.
6. ಹಿ.ವ್ಯ-01/02 ಹಾಗೂ ಅಧ್ಯಕ್ಷರ ಕಚೇರಿಯ ಎಲ್ಲಾ ವಿಷಯ ನಿರ್ವಾಹಕರ ಗಮನಕ್ಕಾಗಿ.
7. ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಬೆಂ.ಜ.ಮಂ ನೌಕರರ ಸಂಘ/ಅಭಿಯಂತರರ ಸಂಘ ರವರ ಮಾಹಿತಿಗಾಗಿ.